ರಿಟರ್ನಿಂಗ್ ಅಧಿಕಾರಿ ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ, ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರ ಕಾರ್ಯಾಲಯ

## ಚುನಾವಣಾ ನೋಟೀಸ್

ನಮೂನೆ –XII

(ಕ.ಸ.ಸ. ನಿಯಮ 14(3) ರಡಿಯಲ್ಲಿ)

ಸಂಘದ ಬೈಲಾ ಸಂಖ್ಯೆ : 20(i) ಪ್ರಕಾರ ಚುನಾಯಿಸಬೇಕಾದ ನಿರ್ದೇಶಕರ ಒಟ್ಟು ಸಂಖ್ಯೆ : 15 ಇದರಲ್ಲಿ

| | | |
|---|---|---|
| 01 | ಸಾಮಾನ್ಯ ಸ್ಥಾನಗಳು | 09 (ಒಂಬತ್ತು) |
| 02 | ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 01 (ಒಂದು) |
| 03 | ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 01 (ಒಂದು) |
| 04 | ಮಹಿಳೆಯರಿಗಾಗಿ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 02 (ಎರಡು) |
| 05 | ಹಿಂದುಳಿದ ವರ್ಗ–ಎ (ಪ್ರವರ್ಗ–ಎ)ಕ್ಕೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 01 (ಒಂದು) |
| 06 | ಹಿಂದುಳಿದ ವರ್ಗ–ಬಿ (ಪ್ರವರ್ಗ–ಬಿ)ಕ್ಕೆ ಮೀಸಲಿರಿಸಿದ ನಿರ್ದೇಶಕರ ಸ್ಥಾನಗಳ ಸಂಖ್ಯೆ | 01 (ಒಂದು) |

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪ್ರಬಾರ) ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ :ಸಚುಪ್ರಾ/ಬೆಂ.ಪ್ರಾ/ದಾ.ಜಿ/ಆಮಂಚು–ರಿಅನೇ/17/2024–25 ದಿನಾಂಕ : 04.09.2024 ರನ್ವಯ ರಿಟರ್ನಿಂಗ್ ಅಧಿಕಾರಿಯಾದ ನಾನು ದಿನಾಂಕ 29/10/2024ರ ಚುನಾವಣಾಧಿಕಾರಿಯವರ ನಿರ್ದೇಶನದನ್ವಯ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮಗಳನ್ವಯ ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ. ಇದರ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗಾಗಿ ಸಾಮಾನ್ಯ ಚುನಾವಣೆಯನ್ನು ದಿನಾಂಕ : 09.02.2025 ನೇ ಭಾನುವಾರದಂದು ಶ್ರೀ ತರಳುಬಾಳು ಜಗದ್ಗುರು ಆಂಗ್ಲ ಮಾಧ್ಯಮ ಶಾಲೆ ಹಾಗೂ ಶ್ರೀ ತರಳುಬಾಳು ಸೆಂಟ್ರಲ್ ಸ್ಕೂಲ್, ಅನುಭವ ಮಂಟಪ ಭದ್ರಾವತಿ ರಸ್ತೆ ಅಜ್ಜಿಹಳ್ಳಿ (ಅಂಚೆ) ಚನ್ನಗಿರಿ (ತಾ), ದಾವಣಗೆರೆ (ಜಿ) ಈ ಸ್ಥಳದಲ್ಲಿ ನಡೆಸಲು ನಿಗಧಿಪಡಿಸಿ, ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ.

### ಚುನಾವಣಾ ವೇಳಾಪಟ್ಟಿ

| ಕ.ಸಂ | ಚುನಾವಣಾ ಕಾರ್ಯಸೂಚಿ | ನಿಯಮ ಸಂಖ್ಯೆ | ದಿನಾಂಕ & ವೇಳೆ | ವಿವರ ಮತ್ತು ಸ್ಥಳ |
|---|---|---|---|---|
| 1 | ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ ಮತ್ತು ವೇಳೆ | 14(ಎ) | ದಿನಾಂಕ : 25.01.2025 ನೇ ಶನಿವಾರ ದಿಂದ ಪ್ರಾರಂಭ ಬೆಳಗ್ಗೆ 11–00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ಸಂಘದ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ |
| 2 | ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ | 14(ಎ) | ದಿನಾಂಕ : 01.02.2025 ನೇ ಶನಿವಾರ ದಿಂದ ಪ್ರಾರಂಭ ಬೆಳಗ್ಗೆ 11–00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ಸಂಘದ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ |
| 3 | ಅಭ್ಯರ್ಥಿಗಳಿಂದ ಸಲ್ಲಿಸಲ್ಪಟ್ಟ ನಾಮಪತ್ರಗಳ ಪರಿಶೀಲನೆ | 14ಬಿ | ದಿನಾಂಕ : 02.02.2025 ನೇ ಭಾನುವಾರ ದಿಂದ ಪ್ರಾರಂಭ ಬೆಳಗ್ಗೆ 11–30 ರಿಂದ | ಸಂಘದ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ |
| 4 | ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14ಬಿ (4) | ದಿನಾಂಕ : 02.02.2025 ನೇ ಭಾನುವಾರ ನಾಮಪತ್ರ ಪರಿಶೀಲನೆಯ ನಂತರ | ಸಂಘದ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಂದ |
| 5 | ಸ್ಪರ್ದೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ವೇಳೆ | 14 (ಸಿ) | ದಿನಾಂಕ : 03.02.2025 ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯವರೆಗೆ | ಸಂಘದ ಆಡಳಿತ ಕಛೇರಿಯಲ್ಲಿ ಖುದ್ದಾಗಿ ಅಭ್ಯರ್ಥಿಗಳಿಂದ ರಿಟರ್ನಿಂಗ್ ಅಧಿಕಾರಿ ರವರಿಗೆ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರಿಗೆ |
| 6 | ಚುನಾವಣಾಧಿಕಾರಿಗಳಿಂದ ಅರ್ಹ ಉಮೇದುದಾರರ/ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14 (ಡಿ) | ದಿನಾಂಕ : 03.02.2025 ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ | ಸಂಘದ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿ ರವರಿಂದ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರಿಂದ |
| 7 | ಅವಶ್ಯ ಬಿದ್ದಲ್ಲಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ಹಂಚಿಕೆ | 14 (ಇ) | ದಿನಾಂಕ : 03.02.2025 ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ | ಸಂಘದ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿ ರವರಿಂದ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರಿಂದ |
| 8 | ಚಿಹ್ನೆಗಳ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 14 (ಇ) | ದಿನಾಂಕ : 04.02.2025 ನೇ ಮಂಗಳವಾರ ಬೆಳಗ್ಗೆ 11.00 ಗಂಟೆಗೆ | ಸಂಘದ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿ ರವರಿಂದ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರಿಂದ |
| 9 | ಮತದಾನದ ಸ್ಥಳ, ದಿನಾಂಕ ಮತ್ತು ವೇಳೆ | | ದಿನಾಂಕ : 09.02.2025 ನೇ ಭಾನುವಾರ ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ | ಶ್ರೀ ತರಳುಬಾಳು ಜಗದ್ಗುರು ಆಂಗ್ಲ ಮಾಧ್ಯಮ ಶಾಲೆ ಹಾಗೂ ಶ್ರೀ ತರಳುಬಾಳು ಸೆಂಟ್ರಲ್ ಸ್ಕೂಲ್, ಅನುಭವ ಮಂಟಪ ಭದ್ರಾವತಿ ರಸ್ತೆ ಅಜ್ಜಿಹಳ್ಳಿ (ಅಂಚೆ) ಚನ್ನಗಿರಿ (ತಾ), ದಾವಣಗೆರೆ (ಜಿ) |
| 10 | ಮತಗಳ ಎಣಿಕೆ ದಿನಾಂಕ, ವೇಳೆ ಮತ್ತು ಸ್ಥಳ | | ದಿನಾಂಕ : 09.02.2025 ನೇ ಭಾನುವಾರ ಮತದಾನ ಮುಕ್ತಾಯಗೊಂಡ ನಂತರ | ಶ್ರೀ ತರಳುಬಾಳು ಜಗದ್ಗುರು ಆಂಗ್ಲ ಮಾಧ್ಯಮ ಶಾಲೆ ಹಾಗೂ ಶ್ರೀ ತರಳುಬಾಳು ಸೆಂಟ್ರಲ್ ಸ್ಕೂಲ್, ಅನುಭವ ಮಂಟಪ ಭದ್ರಾವತಿ ರಸ್ತೆ ಅಜ್ಜಿಹಳ್ಳಿ (ಅಂಚೆ) ಚನ್ನಗಿರಿ (ತಾ), ದಾವಣಗೆರೆ (ಜಿ) |
| 11 | ಚುನಾವಣಾ ಫಲಿತಾಂಶ ಘೋಷಣೆ, ಮತ್ತು ಪ್ರಕಟಣೆ ದಿನಾಂಕ, ವೇಳೆ ಮತ್ತು ಸ್ಥಳ | | ದಿನಾಂಕ : 09.02.2025 ನೇ ಭಾನುವಾರ ಮತ ಎಣಿಕೆಯ ಮುಕ್ತಾಯದ ನಂತರ | ರಿಟರ್ನಿಂಗ್ ಅಧಿಕಾರಿ ರವರಿಂದ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರಿಂದ ಸಂಘದ ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ |

ಪು.ತಿ.ನೋ.

## ಸೂಚನೆಗಳು

1) ಚುನಾವಣೆಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960, ಸಂಘದ ಉಪನಿಯಮಗಳ ರೀತ್ಯಾ ನಡೆಯುತ್ತದೆ.
2) ಸಂಘದ ಬೈಲಾ ಪ್ರಕಾರ ಒಟ್ಟು 15 ಜನ ನಿರ್ದೇಶಕರ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ ಮೀಸಲು 01 (ಒಂದು)ಸ್ಥಾನ, ಪರಿಶಿಷ್ಟ ಪಂಗಡಕ್ಕೆ ಮೀಸಲು 01 (ಒಂದು) ಸ್ಥಾನ, ಹಿಂದುಳಿದ ಪ್ರವರ್ಗ–ಎ ಮೀಸಲು 01 (ಒಂದು) ಸ್ಥಾನ, ಹಿಂದುಳಿದ ಪ್ರವರ್ಗ –ಬಿ ಮೀಸಲು 01 (ಒಂದು) ಸ್ಥಾನ, ಮಹಿಳಾ ಮೀಸಲು 02 (ಎರಡು) ಸ್ಥಾನ ಹಾಗೂ ಸಾಮಾನ್ಯ 09 (ಒಂಬತ್ತು) ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.
3) ಅಭ್ಯರ್ಥಿಗಳು ನಾಮಪತ್ರವನ್ನು ದಿನಾಂಕ : 25.01.2025 ರಿಂದ ದಿನಾಂಕ : 01.02.2025 ಅವಧಿಯಲ್ಲಿ ಬೆಳಗ್ಗೆ 11.00 ರಿಂದ ಮಧ್ಯಾಹ್ನ 3 ಗಂಟೆಯ ಒಳಗೆ ಸಂಘದ ಆಡಳಿತ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸಬಹುದು.
4) ಒಬ್ಬ ಅಭ್ಯರ್ಥಿಯು ಯಾವುದಾದರು ಒಂದು ನಿರ್ದೇಶಕರ ಸ್ಥಾನಕ್ಕೆ ಮಾತ್ರ ನಾಮಪತ್ರ ಸಲ್ಲಿಸಲು ಅವಕಾಶವನ್ನು ಹೊಂದಿರುತ್ತಾರೆ.
5) ಒಬ್ಬ ಅರ್ಹ ಮತದಾರ ಸದಸ್ಯನು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳ ನಾಮಪತ್ರಕ್ಕೆ ಸೂಚನೆ ಮಾಡತಕ್ಕದ್ದಲ್ಲ.
6) ಸಹಕಾರ ಸಂಘಗಳ ತಿದ್ದುಪಡಿ ಕಾಯ್ದೆ, ನಿಯಮ ಮತ್ತು ಬೈಲಾ ಪ್ರಕಾರ ನಿರ್ದೇಶಕ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.
7) ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು ತಾನು ಯಾವ ಸ್ಥಾನಕ್ಕೆ ಸ್ಪರ್ಧಿಸಲು ಇಚ್ಛಿಸುತ್ತೇನೆ ಎಂಬುದನ್ನು ಸ್ಪಷ್ಟವಾಗಿ ಹಾಗೂ ನಿಖರವಾಗಿ ನಾಮಪತ್ರದಲ್ಲಿ ನಮೂದಿಸತಕ್ಕದ್ದು.
8) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿಗಳು, ಅವರಿಗೆ ಸಂಬಂಧಿಸಿದಂತೆ ಚುನಾವಣಾ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಸಲ್ಲಿಸತಕ್ಕದ್ದು.
9) ಹಿಂದುಳಿದ ವರ್ಗ–ಎ ಮತ್ತು ಹಿಂದುಳಿದ ವರ್ಗ–ಬಿ ವರ್ಗದ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿಗಳು ಪಂಚಾಯತ್ ರಾಜ್ ಅಧಿನಿಯಮದಡಿ ಅಧಿಸೂಚಿಸುವಂತೆ ಚುನಾವಣಾ ಉದ್ದೇಶಕ್ಕಾಗಿ ಇತ್ತೀಚೆಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣಪತ್ರವನ್ನು ನಾಮಪತ್ರದೊಂದಿಗೆ ಸಲ್ಲಿಸತಕ್ಕದ್ದು.
10) ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು ತಾನು ಸಲ್ಲಿಸುವ ನಾಮಪತ್ರದೊಂದಿಗೆ ರೂ 2000/– (ರೂಪಾಯಿ ಎರಡು ಸಾವಿರ ಮಾತ್ರ) ಮೊತ್ತವನ್ನು ಚುನಾವಣಾ ಠೇವಣಿ ಎಂದು ಇದೇ ಸಂಘದಲ್ಲಿ ಪಾವತಿ ಮಾಡಿದ ರಶೀದಿಯನ್ನಾಗಲಿ ಅಥವಾ ಸಂಘದ ಹೆಸರಿಗೆ ಪಡೆದ ಡಿಮಾಂಡ್ ಡ್ರಾಫ್ಟ್‌ನ್ನಾಗಲೀ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. **ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ –ಎ. ಹಿಂದುಳಿದ ವರ್ಗ –ಬಿ. ಮತ್ತು ಮಹಿಳೆಯರಿಗೆ ಈ ಠೇವಣಿಯಲ್ಲಿ ಶೇ 50 ರಷ್ಟು ರಿಯಾಯಿತಿ ಇರುತ್ತದೆ.**
11) ಒಟ್ಟು ಚಲಾವಣೆಯಾದ ಮತಗಳ ಪೈಕಿ ಸಿಂಧುವಾದ ಮತಗಳ 1/6 ಭಾಗವಾದ ಮತಗಳನ್ನು ಸಾಮಾನ್ಯ ಅಭ್ಯರ್ಥಿಗಳು ಹಾಗೂ 1/10 ಭಾಗಗಳ ಮತಗಳನ್ನು ಮೀಸಲಾತಿ ಅಭ್ಯರ್ಥಿಗಳು ನಿಯಮಾವಳಿ ಪ್ರಕಾರ ಪಡೆಯದಿದ್ದಲ್ಲಿ ಚುನಾವಣಾ ಠೇವಣಿ ಮೊಬಲಗನ್ನು ಬ್ಯಾಂಕಿಗೆ/ಸಂಘಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
12) ಕಾಯ್ದೆ ಮತ್ತು ನಿಯಮಾನುಸಾರ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿ ಹೆಸರನ್ನು ಹೊಂದಿರದ ಸದಸ್ಯರಿಗೆ ಈ ಚುನಾವಣೆಯಲ್ಲಿ ಭಾಗವಹಿಸಲು, ಮತದಾನ ಮಾಡಲು ಮತ್ತು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹತೆ ಅಥವಾ ಹಕ್ಕು ಇರುವುದಿಲ್ಲ.
13) ಅಭ್ಯರ್ಥಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಅದ್ಯತಾನುಸಾರವಾಗಿ ಅಪೇಕ್ಷಿಸಿದ ಮೂರು ಚಿಹ್ನೆಗಳನ್ನು ನಾಮಪತ್ರದಲ್ಲಿ ಸೂಚಿಸಬಹುದು. ಈ ರೀತಿ ಸೂಚಿಸಲ್ಪಡುವ ಚಿಹ್ನೆಗಳು ಚುನಾವಣಾ ಆಯೋಗದಿಂದ ಮನ್ನಣೆ ಪಡೆದ ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿನ ರಾಜ್ಯ ಪಕ್ಷಗಳಿಗೆ ನೀಡಲಾದ ಚಿಹ್ನೆಗಳನ್ನು ಹೊರತುಪಡಿಸಿ ಮುಕ್ತ ಚಿಹ್ನೆಗಳಾಗಿರತಕ್ಕದ್ದು. ಇಂತಹ ಮುಕ್ತ ಚಿಹ್ನೆಗಳ ಮಾದರಿಗಳನ್ನು ಆಡಳಿತ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ನಿಯಮಾನುಸಾರ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡಲಾಗುವುದು. ಚಿಹ್ನೆ ಹಂಚಿಕೆಯಲ್ಲಿ ರಿಟರ್ನಿಂಗ್ ಅಧಿಕಾರಿಗಳ ತೀರ್ಮಾನವೇ ಅಂತಿಮವಾಗಿರುತ್ತದೆ.
14) ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಸೂಚಕರು ಮಾತ್ರ ಹಾಜರಿರಬಹುದು.
15) ಉಮೇದುವಾರಿಕೆಯನ್ನು ವಾಪಾಸ್ಸು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಖುದ್ದಾಗಿ ಅರ್ಜಿಯನ್ನು ಸಲ್ಲಿಸಿ ಉಮೇದುವಾರಿಕೆಯನ್ನು ವಾಪಾಸ್ಸು ಪಡೆಯಬಹುದು. ಉಮೇದುವಾರಿಕೆಯನ್ನು ವಾಪಾಸ್ಸು ಪಡೆಯಲು ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗೆ ಅದನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅವಕಾಶವಿರುವುದಿಲ್ಲ.
16) ನಾಮಪತ್ರಗಳನ್ನು ಮತ್ತು ಉಮೇದುವಾರಿಕೆಯನ್ನು ವಾಪಾಸ್ಸು ಪಡೆಯಲು ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲು ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಅಧಿಕಾರ ನೀಡಲಾಗಿದೆ.
17) ಪ್ರತಿಯೊಬ್ಬ ಅರ್ಹ ಮತದಾರರ ಸದಸ್ಯರು ಮತದಾನದ ವೇಳೆಯಲ್ಲಿ ಸಂಘದಿಂದ ನೀಡಲ್ಪಟ್ಟ ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.
18) ಚುನಾವಣಾ ವೇಳಪಟ್ಟಿಯ ಕಾರ್ಯಕ್ರಮಗಳ ಪ್ರಕಾರ ಸಾರ್ವತ್ರಿಕ ರಜೆ ಇದ್ದರೂ ಸಹ ಸಂಘದ ಆಡಳಿತ ಕಛೇರಿಯು ಕಾರ್ಯನಿರ್ವಹಿಸುತ್ತದೆ.
19) **ಸಂಘದ ಕೆಲಸದ ವೇಳೆಯಲ್ಲಿ ನಾಮಪತ್ರಗಳ ಅರ್ಜಿಯ ಶುಲ್ಕ ರೂ 100/–ಗಳನ್ನು ಪಾವತಿಸಿ ವ್ಯವಸ್ಥಾಪಕ ನಿರ್ದೇಶಕರಿಂದ ಪಡೆಯಬಹುದು.**

(ಮಂಜುಳ ಎಸ್)
ರಿಟರ್ನಿಂಗ್ ಆಫೀಸರ್,
ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ.
ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ದಾವಣಗೆರೆ ಉಪ ವಿಭಾಗ, ದಾವಣಗೆರೆ.

ದಿನಾಂಕ : 21.01.2025
ಸ್ಥಳ : ಚನ್ನಗಿರಿ

---

ತೆರೆದ ಅಂಚೆ

ಗೆ,

ಶ್ರೀ.,/ಶ್ರೀಮತಿ ______________________

ಚುನಾವಣೆ ನಡೆಯುವ ಸ್ಥಳ
**(Google Map Location)**

ಇಂದ,
ವ್ಯವಸ್ಥಾಪಕ ನಿರ್ದೇಶಕರು,
ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ.